# ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ



ಎಸ್. ವಿಶ್ವನಾಥ್
ವಿಶ್ವಕವಿ ಹೊಳೆನರಸೀಪುರ

# ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ

ಮೊದಲ ಮುದ್ರಣ

ಲೇಖಕರು

ಎಸ್. ವಿಶ್ವನಾಥ್ (ವಿಶ್ವಕವಿ)

**ಶೀರ್ಷಿಕೆ:** ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ

**ಮೊದಲ ಮುದ್ರಣ –2023**

**ಕೃತಿಸ್ವಾಮ್ಯ 2023 © ಎಸ್. ವಿಶ್ವನಾಥ್** (ವಿಶ್ವಕವಿ) ಸಾಹಿತಿ, ಸಮಾಜ ಸೇವಕ ಮತ್ತು ಪತ್ರಕರ್ತ, ಹೊಳೆನರಸೀಪುರ, ಹಾಸನ.

No part of this book may be reproduced or transmitted in any form by any means, electronic or mechanical, including photocopy, recording, or any information storage and retrieval system, without permission in writing from the copyright owners.

**Disclaimer**

The author is solely responsible for the contents published in this book. The publishers don't take any responsibility for the same in any manner. Errors, if any, are purely unintentional and readers are requested to communicate such errors to the editors or publishers to avoid discrepancies in future.

**E- ISBN**: **978-93-5747-952-3**

**MRP Rs. 120/-**

**Publisher, Printed at & Distribution by:**

Selfypage Developers Pvt Ltd.,
Pushpagiri Complex,
Beside SBI Housing Board,
K.M. Road Chikkamagaluru, Karnataka.
Tel.: +91-8861518868
E-mail: publish@iiponline.org

**IMPRINT: I I P Iterative International Publishers**

**For Sales Enquiries:**

Contact: +91- 8861511583
E-mail: sales@iiponline.org

|| ಓಂ ಶ್ರೀ ಮಂಜುನಾಥಾಯ ನಮಃ ||
|| OM SHRI MANJUNATHAYA NAMAHA ||

ಧರ್ಮಸ್ಥಳ - 574 216
Dharmasthala - 574 216
ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ
D. K. District, Karnataka

✆: 08256 - 277121
ಇಮೈಲ್: dvheggade@hotmail.com

ದಿನಾಂಕ: 30-01-2020
Date

ರಿಗೆ:

ಎಸ್. ವಿಶ್ವನಾಥ್
S/o ಸತ್ಯನಾರಾಯಣ ಶೆಟ್ಟಿ
ಸೀತಾ ವಿಲಾಸ ರಸ್ತೆ, ಕೋಟೆ
ಹೊಳೆಸರಸೀಮರ ತಾಲ್ಲೂಕು
**ಹಾಸನ ಜಿಲ್ಲೆ – 573 211.**

ನಿಮ್ಮ ಪತ್ರ ತಲುಪಿ ವಿಚಾರ ಅಭಿಪ್ರಾಯವಾಯಿತು. ನೀವು 101 ಜೀವನ ಸಂದೇಶಗಳನ್ನು ಪ್ರಕಟಿಸುವ ವಿಚಾರ ತಿಳಿದು ಸಂತೋಷವಾಯಿತು.

ನನ್ನ ಹಾಗೂ ನಮ್ಮ ಕ್ಷೇತ್ರದ ಮೇಲೆ ನಿಮಗಿರುವ ಆದರಾಭಿಮಾನ ತಿಳಿದು ಸಂತೋಷವಾಯಿತು.

ನಿಮ್ಮ ಪ್ರಯತ್ನಕ್ಕೆ ಸರ್ವ ರೀತಿಯ ಯಶಸ್ಸನ್ನು ಹಾರೈಸುತ್ತೇನೆ.

ನೀವು ಕ್ಷೇತ್ರಕ್ಕೆ ಯಾವುದೇ ಸೋಮವಾರ ಬಂದು ಭೇಟಿಯಾಗಬಹುದು.

ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

ಇತಿ.

D. VEERENDRA HEGGADE
PIN CODE
574 216
DHARMASTHALA, D.K.

(ಡಿ. ವೀರೇಂದ್ರ ಹೆಗ್ಗಡೆಯವರು)

# ಪರಮಪೂಜ್ಯರ
# ಆಶೀರ್ವಾದಗಳೊಂದಿಗೆ



**ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ**
**ಪೀಠಾಧಿಪತಿಗಳು, ಶ್ರೀ ವಾಸವಿ ಪೀಠಂ ಬೆಂಗಳೂರು.**

# ಸವಿನೆನಪು

# ಪೂಜ್ಯ ತಂದೆ-ತಾಯಿಯವರು



**ಎಸ್. ಪಂಚರತ್ನಮ್ಮ**
ಜನನ : 06-11-1938
ಮರಣ: 08-09-2021 ಬುಧವಾರ

**ಸಿ. ಸತ್ಯನಾರಾಯಣಶೆಟ್ಟಿ**
ಜನನ : 31-10-1929 ಗುರುವಾರ
ಮರಣ: 02-11-1996 ಶನಿವಾರ

# ಸವಿನೆನಪು

**ಶ್ರೀಮತಿ ವೆಂಕಟಲಕ್ಷ್ಮಮ್ಮ ಮತ್ತು ಆರ್. ದಾಸಪ್ಪ ಚಾರಿಟಬಲ್ ಟ್ರಸ್ಟ್ (ರಿ)**
**ವೃದ್ಧಾಶ್ರಮ ಮತ್ತು ಅನಾಥಾಶ್ರಮ ಹೊಳೆನರಸೀಪುರ.**



**ಶ್ರೀಮತಿ ವೆಂಕಟಲಕ್ಷ್ಮಮ್ಮ (ರಂಗಮ್ಮ)**
ಮರಣ: 27–11–2013

**ಆರ್. ದಾಸಪ್ಪ**
ಮರಣ: 24–05–2005

**ದಿ|| ಶ್ರೀಮತಿ ವೆಂಕಟಲಕ್ಷ್ಮಮ್ಮ ಮತ್ತು ದಿ|| ಶ್ರೀ ಆರ್. ದಾಸಪ್ಪ.**

********

ಶುಭ ಕೋರುವವರು

**ಶ್ರೀ. ಡಿ. ಮಂಜುನಾಥ್**

ಅಧ್ಯಕ್ಷರು ಮತ್ತು ಸಮಾಜ ಸೇವಕರು,
ಶ್ರೀಮತಿ ವೆಂಕಟಲಕ್ಷ್ಮಮ್ಮ ಮತ್ತು ಆರ್. ದಾಸಪ್ಪ ಚಾರಿಟಬಲ್ ಟ್ರಸ್ಟ್ (ರಿ)
ವೃದ್ಧಾಶ್ರಮ ಮತ್ತು ಅನಾಥಾಶ್ರಮ ಹೊಳೆನರಸೀಪುರ,
ವಾರ್ಡ್ ನಂ: 16. ಕಾಲುವೆ ಕೆರೆ ಬೀದಿ, ಹೊಳೆನರಸೀಪುರ –573211
ಹಾಸನ ಜಿಲ್ಲೆ. ಮೊಬೈಲ್ ನಂ: 89518 80412

# ಸವಿನೆನಪು



**ದಿ॥ ಗೌರಮ್ಮ ಮತ್ತು ದಿ॥ ಟಿ. ಮಲ್ಲೇಶ್‌ರವರು**
**(ಮಾಜಿ ಪುರಸಭೆ ಅಧ್ಯಕ್ಷರು ಹೊಳೆನರಸೀಪುರ)**

********

## ಶುಭಕೋರುವವರು

**ಸಮಾಜ ಸೇವಕರು ಶ್ರೀ ಹೆಚ್.ಎಂ. ಗಿರೀಶ್ ಮತ್ತು ಕುಟುಂಬ,**
**ಹೊಳೆನರಸೀಪುರ.**

# "ಮುನ್ನುಡಿಯ – ನುಡಿಗನ್ನಡಿ"

ಹಾಸನ ಜಿಲ್ಲೆಯ ಹೊಳೆನರಸೀಪುರವು ಪುಣ್ಯ ಭೂಮಿ, ಇದು ವಸಿಷ್ಠ ಮಹರ್ಷಿಗಳ ತಪೋ ಭೂಮಿ, ಅವರ ತಪಸ್ಸಿಗೆ ಒಲಿದು ಶ್ರೀ ಲಕ್ಷ್ಮೀನೃಸಿಂಹ ಸ್ವಾಮಿಯು ಪ್ರತ್ಯಕ್ಷವಾಗಿ, ಹೊಳೆವ ಮೊಗದ ನರಸಿಂಹನಾಗಿ ಇಲ್ಲಿ ನೆಲೆಗೊಂಡಿದ್ದಾನೆ, ಶ್ರೀ.ಶ್ರೀ.ಶ್ರೀ.ರಾಮ ಬ್ರಹ್ಮಾನಂದರ ತಪೋ ಭೂಮಿ, ಶ್ರೀ.ಶ್ರೀ.ಶ್ರೀ. ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳ ಆಧ್ಯಾತ್ಮ ಕೃಷಿ ಭೂಮಿ, ಶ್ರೀ.ಶ್ರೀ.ಶಂಕರಾಚಾರ್ಯರ ಭಾಷ್ಯಗಳನ್ನು ಜಗದಗಲ ಪ್ರಸಾರ ಮಾಡಿ, ವಿಶ್ವ ನಕ್ಷೆಯಲ್ಲಿ ಗುರುತಿಸಿಕೊಂಡಿದೆ ಈ ಪುರ, ಇಂದಿನವರೆಗೂ ಹೊಳೆನರಸೀಪುರದ ಆಧ್ಯಾತ್ಮ ಪ್ರಕಾಶನ ಕಾರ್ಯಾಲಯವು ದಣಿವರಿಯದೆ ತನ್ನ ಸೇವೆಯನ್ನು ಅವಿರತವಾಗಿ ಮುಂದುವರೆಸಿಕೊಂಡು ಬಂದಿದೆ.

ಇಲ್ಲಿನ ಪವಿತ್ರ ಹೇಮಾವತಿ ನದಿಯ ಸಿರಿ ಜಲಧಾರೆ, ಧರೆಗೆ ಹಸಿರನ್ನಷ್ಟೇ ನೀಡಿಲ್ಲ, ಭಕ್ತಿಧಾರೆಯಾಗಿ, ಭಕ್ತಿವರ್ಧನ ಕ್ಷೇತ್ರವೆನಿಸಿದೆ ಈ ಪುರವು, ಶ್ರೀ.ನರಸಿಂಹನಾಯಕರ, ಪರಮ ಭಕ್ತಿಯ ಕೊಡುಗೆಯೇ ಇಲ್ಲಿನ ಶ್ರೀ.ಲಕ್ಷ್ಮೀ ನೃಸಿಂಹ ಸ್ವಾಮಿಯ ದೇವಾಲಯ.

ಈ ರಾಷ್ಟ್ರಕ್ಕೆ ಪ್ರಧಾನಿಯನ್ನು ನೀಡಿದ ಹಿರಿಮೆ ಈ ಪುರದ್ದು, ಸನ್ಮಾನ್ಯ ಶ್ರೀ.ಹೆಚ್.ಡಿ.ದೇವೇಗೌಡರನ್ನು ಭಾರತದ ಪ್ರಧಾನಿಯಾಗಿ ನೀಡಿದ ರಾಜಕೀಯ ಮಹಿಮೆಯ ಕ್ಷೇತ್ರವಿದು. ಸಾಹಿತಿಗಳು, ಗಾಯಕರು, ನಟರು, ಕವಿಗಳು, ಎಲ್ಲರೂ ಈ ಕ್ಷೇತ್ರದ ಹಿರಿಮೆಯನ್ನು ಹೆಚ್ಚಿಸಿದ್ದಾರೆ, ನಮ್ಮ ಊರಿನ ಎಸ್.ವಿಶ್ವನಾಥ್, (ವಿಶ್ವಕವಿ) ಕಾವ್ಯ ನಾಮದಿಂದ ರಚಿಸಿರುವ "ವಿಶ್ವವಾಣಿ" ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ, " ಮಹಾ ನೀತಿ ಸುಧಾಸಾರದ "ಕೃತಿಯನ್ನು ರಚಿಸಿದ್ದಾರೆ, ಒಂದನ್ನು ಪರಮ ಪೂಜ್ಯರಾದ ಶ್ರೀ.ಶ್ರೀ.ಶ್ರೀ. ಶಿವಕುಮಾರಸ್ವಾಮಿ ಗಳಿಗೆ, ಮತ್ತೊಂದನ್ನು ಸೋಮವಾರದ ಸುವಿಚಾರದಿಂದ ಪ್ರೇರಣೆಗೊಂಡು ಧರ್ಮಸ್ಥಳದ ಶ್ರೀ ಮಂಜುನಾಥ ಕ್ಷೇತ್ರದ ಸನ್ಮಾನ್ಯ ಶ್ರೀ. ಡಾ॥ ವೀರೇಂದ್ರ ಹೆಗ್ಗಡೆಯವರ 75ನೇ ಜನ್ಮದಿನದ ಅಮೃತ ಮಹೋತ್ಸವದ ಸವಿ ನೆನಪಿಗಾಗಿ ಎಸ್.ವಿಶ್ವನಾಥ್ (ವಿಶ್ವಕವಿ) ವಿಶ್ವವಾಣಿ ಎಂಬ ಹೆಸರಿನಲ್ಲಿ "ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ" ಎಂಬ ಅಂಕಿತನಾಮದಲ್ಲಿ ರಚಿಸಿರುವ 101 ವಚನ ರೂಪದಲ್ಲಿರುವ ಜೀವನ ಸಂದೇಶಗಳ ಈ ಕೃತಿ ಹಾರ, ನೀತಿಯ ಮುತ್ತುಗಳಿಂದ ಪೋಣಿಸಲ್ಪಟ್ಟಿದೆ, ಎಂದೆಂದಿಗೂ ಬೇಕಾಗಿರುವ ಅಮರ ಸಂದೇಶಗಳಂತೆ ಇವೆ. ಕವಿಯು ಬಳಸಿರುವ ಭಾಷಾ ಶೈಲಿ ಸರಳ ಸುಂದರ, ಉಪಮೆಗೆ ಆರಿಸಿರುವ ವಸ್ತು ನಮ್ಮ ಸುತ್ತ ಮುತ್ತ ಕಾಣಸಿಗುವ ವಸ್ತುಗಳೇ ಆಗಿದೆ, ಉದಾಹರಣೆಗೆ: ನದಿ, ದೀಪ, ಸೂರ್ಯ, ಚಂದ್ರ, ನಕ್ಷತ್ರ, ಸಾಗರ, ಹೂ, ಪುಷ್ಪ, ಗಿಡ ಮರ, ಬಳ್ಳಿ, ಹಕ್ಕಿಗಳು ಇತ್ಯಾದಿ. ಸಹೃದಯವಂತರಿಂದ ಮಾತ್ರ ಇಂತಹ ಸುಕಾವ್ಯ ಸೃಜನ ಸಾಧ್ಯ, ಎಂಬ ಮಾತಿಗೆ ಸಾಕ್ಷಿ, ಈ ಕಾವ್ಯ ಹಾಗೂ ಕವಿ "ವಿಶ್ವವಾಣಿ"ಯಲ್ಲಿ ಬಳಸಿರುವ ಭಾಷೆಗೆ ನಿಘಂಟಿನ ಅವಶ್ಯಕತೆ ಇಲ್ಲ, ಆಡು ನುಡಿಯ ಈ ಮುಕ್ತಕ ನೀತಿ ಧಾರೆ ಸುಲಭವಾಗಿ ಅರ್ಥವಾಗುವಂತಿದೆ. ಇವು ಆಕಾರದಲ್ಲಿ ವಾಮನ ಅರ್ಥದಲ್ಲಿ ತ್ರಿವಿಕ್ರಮವಾಗಿವೆ.

ಜೀವನದ ಅನುಭವವೇ ಸಿದ್ಧಾಂತವೇ ಈ ಕೃತಿಯಲ್ಲಿ ಮೂಡಿಬಂದಿದೆ, ಬದುಕಿಗೆ ದಾರಿ ತೋರುವ ದೀಪವಾಗಿದೆ, ಹಿತ ಮಿತ ಶಬ್ದಗಳ ಔಚಿತ್ಯ ಜೋಡಣೆ ಕವಿಯ ಕಲ್ಪನೆ ಹಾಗು ಜಾಣ್ಮೆಗೆ ಹಿಡಿದ ಕನ್ನಡಿಯಾಗಿದೆ. ಕಲ್ಪನಾ ಲೋಕಕ್ಕೆ ಕೊಂಡೊಯ್ಯುವ ಕಾವ್ಯ ಇದು ಅಲ್ಲ, ಇಂದಿನ ಪ್ರಸ್ತುತ ಬದುಕಿಗೆ ಬೇಕಾದ ಅಣಿ ಮುತ್ತುಗಳು ಇದರಲ್ಲಿವೆ. ಸಾಹಿತ್ಯ ಲೋಕಕ್ಕೆ ಇದೊಂದು ಹೊಸ ಪ್ರಕಾರದ ಕೊಡುಗೆ, ಈ ಪ್ರಕಾರಕ್ಕೆ "ಸತ್ಸಮಾಜ ಸಂದೇಶಗಳ ಗುಚ್ಛ" ಎಂದೇಕೆ ಹೆಸರಿಡಬಾರದು..?

ನಿತ್ಯ–ಸತ್ಯದ–ನಡೆಗೆ ಇದು ಅವಶ್ಯಕ. ಪ್ರಸ್ತುತ ಸಮಾಜದ ಸುಖ ಸೌಖ್ಯ ಶಾಂತಿಗೆ ಇಂತಹ ಕಾವ್ಯಗಳು ಪ್ರಸ್ತುತ. ಓದುಗರನ್ನು ಗೊಂದಲಕ್ಕೆ ಸಿಲುಕಿಸುವ ಗೋಜಲುಗಳು ಇಲ್ಲಿಲ್ಲ, ಎಲ್ಲಾ ಮುಕ್ತಕಗಳು ಸರಳ ಪದ ಗುಚ್ಛಗಳಿಂದ ಆಕರ್ಷಕವಾಗಿವೆ.

ಇಲ್ಲಿರುವ **101** ವಿಶ್ವ ವಾಣಿಯ ನೀತಿ ಧಾರೆಯು ಶ್ರೀ. ಡಾ॥ ಡಿ. ವೀರೇಂದ್ರ ಹೆಗ್ಗಡೆಯವರ ಹೃದಯಾಂತರಾಳ ದಿಂದ ಹರಿದು ಬಂದಿರುವ ಪಾವನ ಗಂಗೆಯೇ ಸರಿ, ಇಂತಹ ಅನುಪಮ ದಿವ್ಯ ನುಡಿ ಮುತ್ತುಗಳು ಈ "ವಿಶ್ವ ವಾಣಿ" ಗೆ ಸದ್ಗುರುವಿನ ಆಶೀರ್ವಾದದಿಂದ ಮಾತ್ರ ಒದಗಿ ಬಂದಿರಲು ಸಾಧ್ಯ ಎನ್ನುವ ಮಾತಿನಲ್ಲಿ ಉತ್ಪ್ರೇಕ್ಷೆಯಿಲ್ಲ.

ಇಂದಿನ ಯುವ ಪೀಳಿಗೆಗೆ ಇದೊಂದು ಚಿಕಿತ್ಸಕ ಕೃತಿ, ದಾರಿ–ತಪ್ಪದಂತೆ, ಸರಿ ದಾರಿ ತೋರಿ, ಎಡವದಂತೆ ಕೈ ಹಿಡಿದು ಬದುಕು ಸಾಗಿಸಲು, ಇಂದು ಇಂತಹ ಕೃತಿಗಳು ಅತ್ಯವಶ್ಯಕ. ಈ ಕೃತಿಯ ಮತ್ತೊಂದು ವಿಶೇಷ ವೆಂದರೆ, ಇದರ ಅತ್ಯಾಕರ್ಷಕ ವರ್ಣದೈಸಿರಿ ಈ ವರ್ಣಗಳು ಸಾರಿ ಹೇಳುತ್ತಿವೆ, ರಂಗು–ರಂಗಿನಾ ಈ ಲೋಕದಲ್ಲಿ ಮಾಯಾ ಜಾಲದ ಬಲೆಯಲ್ಲಿ ಸಿಲುಕದಿರು ಮನುಜ, ರಂಗುಗಳ ಮರೆಯಲ್ಲಿ ಅಡಗಿದೆ ನೋಡು ಜೀವನದ ನಿಜವಾದ ರೂಪ,ಅದನ್ನು ನೀನು ಅನುಸರಿಸು ರಂಗುಗಳು ಚಿತ್ತಾಕರ್ಷಕವಾದರೂ, ಅವು ಶಾಶ್ವತವಲ್ಲ, ರಂಗಿನಾಳದ ಅಂತರಂಗದ ಧ್ವನಿ, ಅದರ ಸಂದೇಶ ಅಮರ.

ಕವಿಯ ಸಾಮಾಜಿಕ ಕಾಳಜಿ ಈ ನುಡಿಗಳಲ್ಲಿ ಅಡಗಿದೆ.ಸಮಾಜ ಹೇಗಿದೆ, ಹೇಗಿದ್ದರೆ ಸೊಗಸು ಎಂಬುದನ್ನು ತಿಳಿಸುತ್ತಾ, ಅಲ್ಲಲ್ಲಿ ಆರೋಗ್ಯಕರ ವ್ಯಂಗ್ಯವಿದ್ದರೂ ಅದು ಬದುಕಿಗೆ ಬೇಕಾದ್ದೇ ಆಗಿದೆ.ನಮ್ಮೂರ ಎಸ್.ವಿಶ್ವನಾಥ್ (ವಿಶ್ವಕವಿ) ಯ ವಿಶ್ವವಾಣಿ, "ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ" ಈ ಚೊಚ್ಚಲ ಕೃತಿ ನಮ್ಮ ನಾಡಿನಲ್ಲಷ್ಟೇ ಅಲ್ಲ, ವಿಶ್ವಮಾನ್ಯವಾಗಲಿ, ಇದರ ಅಣಿ ಮುತ್ತುಗಳು ವಿವಿಧ ಭಾಷೆಗಳಿಗೆ ಭಾಷಾಂತರವಾಗಲಿ, ವಿಶ್ವದಗಲ ಈ ಅನುಭವಾಮೃತ ಸಿರಿನುಡಿ ಹರಿದಾಡಲಿ.

ಕವಿಗೆ ಸದ್ಗುರುವಿನ ಅನುಗ್ರಹ ದೊರೆಯಲಿ, ಕವಿಯ ಲೇಖನಿಯಿಂದ ಮತ್ತಷ್ಟು ಅಮೂಲ್ಯ ಕೃತಿ ಹಾರಗಳು ಬಂದು, ಸಾಹಿತ್ಯ ಶ್ರೀಯ ಕೊರಳನ್ನು ಅಲಂಕರಿಸಲಿ.ಈ ಕಾವ್ಯ ಕೃಷಿಗೆ ಬೇಕಾಗುವ ಪ್ರೇರಕ– ಪೂರಕ– ಪ್ರೋತ್ಸಾಹದಾಯಕ, ಸನ್ನಿವೇಶವು ಒದಗಿ ಬರಲಿ. ಸೋಮವಾರದ ಸುವಿಚಾರವು, ವಿಶ್ವವಾಣಿಯ ಮಸ್ತಕಕ್ಕೆ ಮತ್ತಷ್ಟು ಜ್ಞಾನಧಾರೆ ಹರಿಸಲಿ, ಸದ್ಗುರುವು ಕೃಪೆ ತೋರಿ ಕೈ ಹಿಡಿದು ಬರೆಸಲಿ ಎಂದು ಹಾರೈಸುವೆ.

ಆಶೀರ್ವಾದಗಳೊಂದಿಗೆ,


ಶ್ರೀಮತಿ. ಕೆ.ಎಸ್.ರಮಾಮಣಿ. ಎಂ.ಎ.ಬಿ.ಇಡಿ.
ನಿವೃತ್ತ ಶಿಕ್ಷಕಿ, ಕೋಟೆ,
ರಾಮ ಬ್ರಹ್ಮಾನಂದ ಪ್ರವಚನ ಮಂದಿರದ ಹತ್ತಿರ
ಹೊಳೆನರಸೀಪುರ – **573211**

# ಕವಿ ಪರಿಚಯ



ಎಸ್. ವಿಶ್ವನಾಥ್ (ವಿಶ್ವಕವಿ)

ಹೊಳೆನರಸೀಪುರ:– ಭಕ್ತಿ ವರ್ಧನ ಕ್ಷೇತ್ರವೆಂದು ಇತಿಹಾಸ ಪ್ರಸಿದ್ಧವಾದ ಹೇಮಾವತಿ ನದಿ ತೀರದ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ನೆಲೆಸಿರುವ ಹೊಳೆನರಸೀಪುರದ ಸೀತಾ ವಿಲಾಸ ರಸ್ತೆಯಲ್ಲಿ ವಾಸವಾಗಿದ್ದ ಹಾರ್ಮೋನಿಯಂ ಕಲಾವಿದ ಮತ್ತು ಹರಿಕಥಾ ವಿದ್ವಾನ್ ಲೇ. ಶ್ರೀ ಸಿ.ಸತ್ಯನಾರಾಯಣಶೆಟ್ಟಿ ಮತ್ತು ಲೇ.ಶ್ರೀಮತಿ ಎಸ್. ಪಂಚರತ್ನಮ್ಮ ನವರ ಪುತ್ರರಾಗಿ 1975 ಜುಲೈ 22 ರಂದು ಜನಿಸಿದ ಎಸ್. ವಿಶ್ವನಾಥ್ (ವಿಶ್ವಕವಿ) ಅವರು ಚಿಕ್ಕಂದಿನಿಂದಲೇ ಕುಟುಂಬದಲ್ಲಿದ್ದ ಕನ್ನಡಮಯ ಸಂಗೀತ ಮತ್ತು ಸಾಹಿತ್ಯದ ವಾತಾವರಣದಲ್ಲಿ ಬೆಳೆದವರು, ಚಿಕ್ಕ ವಯಸ್ಸಿನಲ್ಲಿ ಅವರ ತಂದೆ ಹಾಡುತ್ತಿದ್ದ ದಾಸರ ಪದಗಳು, ಶಿವ ಶರಣರ ವಚನಗಳಿಂದ ಪ್ರಭಾವಿತರಾದ ಇವರು ತಮ್ಮ ಹೈಸ್ಕೂಲ್ ಮಟ್ಟದಿಂದಲೇ ಕವಿತೆಗಳನ್ನು ಬರೆಯಲು ಪ್ರಾರಂಭಿಸಿದರು, ನಂತರದ ದಿನಗಳಲ್ಲಿ ಪದವಿ ಪೂರ್ವ ಮತ್ತು ಪದವಿಯ ಹಂತಕ್ಕೆ ಬಂದಾಗ ತಮ್ಮ ಶಾಲಾ ಕಾಲೇಜಿನ ಪದವಿ ತರಗತಿಯ ಗುರು ಹಿರಿಯರ ಮಾರ್ಗದರ್ಶನದಲ್ಲಿ ಸಾಹಿತ್ಯ ಕೃಷಿ ಆರಂಭಿಸಿದ ಇವರು ಇದುವರೆಗೂ ಸತತವಾಗಿ 25 ವರ್ಷಗಳಿಂದ ಸಾಹಿತ್ಯ ಕೃಷಿಯಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡು ಬಂದಿದ್ದಾರೆಂದರೇ ಅತಿಶಯವೇನಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ. ಪದವೀಧರರಾದ ಇವರು ಮೊದಮೊದಲು ಹಾಸನ ಜಿಲ್ಲಾ ಮಟ್ಟದ ದಿನಪತ್ರಿಕೆಯಲ್ಲಿ ಇವರು ಬರೆದ ಕವಿತೆಗಳು ಮುದ್ರಣವಾಗುತ್ತಿತ್ತು, ನಂತರದ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ, ಚುಟುಕು ಸಾಹಿತ್ಯ ಪರಿಷತ್ತಿನ ಒಡನಾಟ ಇಟ್ಟುಕೊಂಡ ಇವರು ಕ್ರಮೇಣವಾಗಿ ಪ್ರವರ್ಧಮಾನಕ್ಕೆ ಬಂದರು, ತನ್ನ ಓದುಗರನ್ನು "ಓದುಗ ದೊರೆಗಳೇ" ಎಂದು ಪ್ರೀತಿಯಿಂದ ಸಂಭೋದಿಸುವ ಇವರು, ಅನೇಕ ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ, ಹೋಬಳಿ ಮಟ್ಟದ ಕವಿ ಗೋಷ್ಠಿಗಳಲ್ಲಿ, ಸಾಹಿತ್ಯ ಸಮ್ಮೇಳನದಲ್ಲಿ ಮತ್ತು ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡಮಿಯಿಂದ ಪ್ರಶಸ್ತಿಯನ್ನು ಪಡೆದಿದ್ದಾರೆ. ಹಾಸನ

ಆಕಾಶವಾಣಿಯ ಯುವ ವಾಣಿ ವಿಭಾಗದಲ್ಲಿ ಸ್ವರಚಿತ ಕವಿತಾ ವಚನವನ್ನು ಸಹಾ ಮಾಡಿದ್ದಾರೆ.

ಕಾಲೇಜು ದಿನಗಳಲ್ಲಿ ಕುವೆಂಪು ವಿಚಾರ ವೇದಿಕೆಯ ಸಂಚಾಲಕರಾಗಿ, ಹೊಳೆನರಸೀಪುರದ ಚುಟುಕು ಸಾಹಿತ್ಯ ಪರಿಷತ್ತಿನ ಮಾಜಿ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಸಹ ಕಾರ್ಯದರ್ಶಿಯಾಗಿ, ಬರಹಗಾರರ ಸಂಘದ ಸಹ ಕಾರ್ಯದರ್ಶಿಯಾಗಿ, ಮತ್ತು ಹತ್ತು ಹಲವು ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ, ಜೊತೆಗೆ ಸ್ವಯಂ ಸೇವಕರಾಗಿ ತಾಲ್ಲೂಕು ಅಡಳಿತದ ಜೊತೆ ಕೈ ಜೋಡಿಸಿ ಕೊರೋನ ಜಾಗೃತಿ ಮೂಡಿಸುವ ಕೆಲಸವನ್ನು ಸಹ ಮಾಡಿದ್ದಾರೆ,

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ತಾಲ್ಲೂಕು ಸದಸ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯ, ಕಳೆದ ಏಳೆಂಟು ವರ್ಷಗಳಿಂದ ಪ್ರಚಲಿತ ಸೋಷಿಯಲ್ ಮೀಡಿಯಾಗಳಾದ ಫೇಸ್‌ಬುಕ್, ವಾಟ್ಸಾಪ್ ನಲ್ಲಿ ಇವರು ಕ್ರಿಯಾಶೀಲರಾಗಿದ್ದು, ಫೇಸ್‌ಬುಕ್ ನಲ್ಲಿ "ವಿಶ್ವಕವಿ ಹೊಳೆನರಸೀಪುರ "ಎಂಬ ಖಾತೆಯಿಂದ ಇದುವರೆಗೂ ಸುಮಾರು 5000 ಕ್ಕೂ ಹೆಚ್ಚಿನ ಬರಹಗಳನ್ನು ಬರೆದು ಪೋಸ್ಟ್ ಮಾಡಿದ್ದಾರೆ, ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಇವರ ಬರಹಗಳಲ್ಲಿ ಸಾವಿರಾರು ಸುದ್ದಿ ಸಮಾಚಾರಗಳು, ಕವಿತೆ, ಚುಟುಕು, ಪ್ರಬಂಧಗಳು, ಚಿಂತನ ಮಂಥನಗಳು, ಸೂಕ್ತಿಗಳು, ಸುಭಾಷಿತಗಳು, ವಚನಗಳು, ವರದಿಗಳು, ವ್ಯಕ್ತಿ ಚಿತ್ರಣಗಳು, ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆಗಳು, ಭಕ್ತಿ ಗೀತೆ, ಭಾವಗೀತೆ, ಹಾಸ್ಯ ಬರಹಗಳು, ಪ್ರಹಸನಗಳು ಮತ್ತು ಇನ್ನೂ ಮುಂತಾದ ವೈವಿಧ್ಯಮಯ ಬರಹಗಳು ಇವರ ಫೇಸ್‌ಬುಕ್ ಖಾತೆಯಲ್ಲಿ ಅನಾರವರಣವಾಗಿವೆ.

ಇಷ್ಟೆಲ್ಲಾ ಸಾಹಿತ್ಯ ಕೃಷಿಗೆ ಮೇಲ್ಪಂಕ್ತಿಯಾಗಿ ಇವರ ಸತತ ಕಳೆದ ಐದು ವರ್ಷಗಳ ಪರಿಶ್ರಮದ ಫಲವಾಗಿ ರಚಿಸಿರುವ ಕರ್ನಾಟಕ ರತ್ನ ನಡೆದಾಡುವ ದೇವರು ಡಾ.ಶಿವಕುಮಾರಸ್ವಾಮಿಗಳ ಜನ್ಮದಿನದ ಪ್ರಯುಕ್ತ ನಡೆದಾಡುವ ದೇವರು ಎಂಬ ಅಂಕಿತನಾಮದಲ್ಲಿ ಬರೆದಿರುವ "ನಡೆದಾಡುವ ದೇವರಿಗೆ ವಿಶ್ವ ನಮನ" ಎಂಬ 112 ಜೀವನ ಸಂದೇಶಗಳ ಕೃತಿ ಮತ್ತು ಧರ್ಮಸ್ಥಳದ ಧರ್ಮಾಧಿಕಾರಿ ಕರ್ನಾಟಕ ರತ್ನ ಪದ್ಮಭೂಷಣ ಡಾ.ವೀರೇಂದ್ರ ಹೆಗ್ಗಡೆಯವರ ಜನ್ಮದಿನದ ಪ್ರಯುಕ್ತ "ಧರ್ಮಸ್ಥಳದ ದೇವತಾ ಮನುಷ್ಯ " ಎಂದ ಅಂಕಿತನಾಮದಲ್ಲಿ ಬರೆದಿರುವ "ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವನಮನ " ಎಂಬ 101 ಜೀವನ ಸಂದೇಶಗಳ ಕೃತಿ ಮುದ್ರಣವಾಗಿ ಬಿಡುಗಡೆಯಾಗುತ್ತಿದೆ.

ಸಾಹಿತ್ಯ, ಸಮಾಜ ಸೇವೆ ಮತ್ತು ಪತ್ರಿಕೋದ್ಯಮ ಈ ಮೂರರಲ್ಲೂ ತೊಡಗಿಸಿಕೊಂಡಿರುವ ಇವರ ವ್ಯಕ್ತಿತ್ವ ಈ ಮೂರರ ತ್ರಿವೇಣಿ ಸಂಗಮವಾಗಿದ್ದು, ಇವರು ಕೆಲವು ವರ್ಷಗಳ ಹಿಂದೆ ಪ್ರತಿನಿಧಿ ಪತ್ರಿಕೆಯ ಮೂಲಕ ಪತ್ರಿಕೋದ್ಯಮ ಕ್ಷೇತ್ರಕ್ಕೆ ಸಹ ಪಾದಾರ್ಪಣೆ ಮಾಡಿದ್ದಾರೆ, ಇದೀಗ ಇಲ್ಲಿಯೂ ಅವರ ಛಾಪನ್ನು ಮೂಡಿಸಿದ್ದು ಸಮಕಾಲೀನ ಬರಹಗಳ ಮೂಲಕ ಗಮನ ಸೆಳೆದಿದ್ದಾರೆ, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರಾದ ಇವರು ಪ್ರಸ್ತುತ, ಹಾಸನ ಮಾಧ್ಯಮ, ದಿಟ್ಟ ಧ್ವನಿ, ಸಿಂಹ ಧ್ವನಿ, ಪತ್ರಿಕೆಯ ಹೊಳೆನರಸೀಪುರ ತಾಲ್ಲೂಕು ವರದಿಗಾರರಾಗಿ ಕೆಲಸ ಮಾಡುತ್ತಿದ್ದಾರೆ.

ವೃತ್ತಿಯಲ್ಲಿ ಹೊಳೆನರಸೀಪುರದ ಗಾಂಧಿ ಸರ್ಕಲ್‌ನಲ್ಲಿರುವ ಬಾಲಾಜಿ ಮೆಡಿಕಲ್ ಲ್ಯಾಬ್ ನಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿರುವ ಇವರು ವೃತ್ತಿ ಮತ್ತು ಸಾಹಿತ್ಯ ರಚನೆಯ ಪ್ರವೃತ್ತಿಯನ್ನು ಸರಿದೂಗಿಸಿಕೊಂಡು ಸಾಗುತ್ತಿದ್ದು ಇವರು, ನಮ್ಮ ಕನ್ನಡ ನಾಡು ನುಡಿಗಾಗಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, ಹಾಸನದ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ವತಿಯಿಂದ ಇವರಿಗೆ 2020 ನೇ ಸಾಲಿನ 65 ನೇ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಗೌರವಿಸಿ ಸನ್ಮಾನಿಸಲಾಗಿದೆ, ಮತ್ತು 2022 ರಲ್ಲಿ ಹಾಸನದ ಬೂವನ ಹಳ್ಳಿಯಲ್ಲಿ ನಡೆದ 20 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಸನ್ಮಾನಿಸಿ ಗೌರವಿಸಲಾಗಿದೆ.

ಎಸ್. ವಿಶ್ವನಾಥ್ (ವಿಶ್ವಕವಿ)
ಹೊಳೆನರಸೀಪುರ
ಸಾಹಿತಿ, ಸಮಾಜ ಸೇವಕ ಮತ್ತು ಪತ್ರಕರ್ತ.
S/O ಲೇಟ್. ಸಿ. ಸತ್ಯನಾರಾಯಣ ಶೆಟ್ಟಿ
ಸೀತಾವಿಲಾಸ ರಸ್ತೆ, ಕೋಟೆ
ಹೊಳೆನರಸೀಪುರ – 573211
ಹಾಸನ ಜಿಲ್ಲೆ.
ಮೊಬೈಲ್:– 9964689796
**Email: viswalabhnp@gmail.com**

# ಲೇಖಕರ ನುಡಿ

## ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ

ಕರ್ನಾಟಕದ ಪವಿತ್ರ ತೀರ್ಥ ಕ್ಷೇತ್ರಗಳಲ್ಲಿ ಒಂದಾದ ನೇತ್ರಾವತಿ ನದಿಯ ತೀರದಲ್ಲಿರುವ ಶ್ರೀ ಧರ್ಮಸ್ಥಳದ ಮಂಜುನಾಥ ಸ್ವಾಮಿ ನೆಲೆಸಿರುವ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಕರ್ನಾಟಕ ರತ್ನ ಡಾ.ವೀರೇಂದ್ರ ಹೆಗ್ಗಡೆಯವರು ನಾಡಿನಾದ್ಯಂತ ಚಿರಪರಿಚಿತರು ಮತ್ತು ಅವರ ಬಗ್ಗೆ ಜನತೆಯಲ್ಲಿ ಪೂಜ್ಯ ಭಾವನೆ ತಾನಾಗಿಯೇ ಮೂಡುತ್ತದೆ.

ಧಾರ್ಮಿಕ ಕ್ಷೇತ್ರವಾಗಿ ನಮ್ಮ ನಾಡಿನ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವ ಸಾಂಸ್ಕೃತಿಕ ರಾಯಭಾರಿಯಾಗಿ, ಹಲವಾರು ದಶಕಗಳಕಾಲ ನಿರಂತರವಾಗಿ ಅನ್ನ ದಾಸೋಹವನ್ನು ಕೋಟ್ಯಾಂತರ ಭಕ್ತರಿಗೆ ಪ್ರೀತಿ ವಾತ್ಸಲ್ಯದಿಂದ ಉಣ ಬಡಿಸುವ ಶ್ರೀ ಧರ್ಮಸ್ಥಳದ ಕ್ಷೇತ್ರವು ವಿಶ್ವ ವಿಖ್ಯಾತವಾಗುವಲ್ಲಿ ಹೆಗ್ಗಡೆಯವರ ಪರಿಶ್ರಮವಿದೆ.

ಶ್ರೀ.ರತ್ನವರ್ಮ ಹೆಗ್ಗಡೆ ಮತ್ತು ಶ್ರೀಮತಿ.ರತ್ನಮ್ಮ ಹೆಗ್ಗಡೆಯವರ ಸುಪುತ್ರರಾಗಿ **1948** ರ ನವೆಂಬರ್ **25** ರಂದು ಜನಿಸಿ, ಶ್ರೀ ಕ್ಷೇತ್ರದ ಧರ್ಮಾಧಿಕಾರಿಯಾಗಿ ಐದು ದಶಕಗಳಿಗೂ ಮೀರಿ ಸೇವೆ ಸಲ್ಲಿಸುತ್ತಿರುವ ಪರಮ ಪೂಜ್ಯ ಡಾ.ವೀರೇಂದ್ರ ಹೆಗ್ಗಡೆಯವರು ಮತ್ತು ಅವರ ಧರ್ಮಪತ್ನಿ ಶ್ರೀಮತಿ ಹೇಮಾವತಿ ಹಗ್ಗಡೆಯವರ ಜೊತೆಗೂಡಿ ದಂಪತಿಗಳಿಬ್ಬರೂ ತಮ್ಮ ಜೀವನವನ್ನು ಜನತಾ ಜನಾರ್ಧನರ ಸೇವೆಗಾಗಿಯೇ ಮೀಸಲಿಟ್ಟಿರುವ ಬಹುಮುಖ ಪ್ರತಿಭೆಯ ವರ್ಣರಂಜಿತ ವ್ಯಕ್ತಿತ್ವವುಳ್ಳವರಾಗಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಸರ್ವತೋಮುಖ ಅಭಿವೃದ್ಧಿಗೆ ಪ್ರಗತಿಗೆ ಕಾರಣಕರ್ತರಾಗಿ, ಇಂದು ಧರ್ಮಸ್ಥಳವನ್ನು ಜಗತ್ತೆ ನಿಬ್ಬೆರಗಾಗಿ ನೋಡುವಂತೆ ಮಾಡುವಲ್ಲಿ ಯಶಸ್ವಿಯಾದವರು ಎಂದರೇ ತಪ್ಪಾಗಲಾರದು. ತಮ್ಮ ದೂರದೃಷ್ಟಿಯ ಜನಪರ ಯೋಜನೆಗಳನ್ನು ಕರ್ನಾಟಕವಲ್ಲದೇ ದೇಶದಾದ್ಯಂತ ಅನುಷ್ಠಾನಕ್ಕೆ ತರಲು ಹಗಲಿರುಳೂ ಶ್ರಮಿಸುವ ಹೆಗ್ಗಡೆಯವರು, ಅನ್ನ ದಾಸೋಹ ಸಾಂಸ್ಕೃತಿಕ, ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಸಹಕಾರ, ಆರ್ಥಿಕ, ಇನ್ನಿತರ ಸಮಾಜಮುಖಿ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡುತ್ತಿದ್ದು. ಪೂಜ್ಯರ ಸೇವೆಗೆ ಭಾರತ ಸರ್ಕಾರದ ವತಿಯಿಂದ ಪದ್ಮಭೂಷಣ, ಪದ್ಮವಿಭೂಷಣ, ರಾಜರ್ಷಿ, ಕರ್ನಾಟಕ ಸರ್ಕಾರದ ವತಿಯಿಂದ ಪ್ರತಿಷ್ಠಿತ ಕರ್ನಾಟಕ ರತ್ನ ಪ್ರಶಸ್ತಿ, ರಾಜೀವ್ ಗಾಂಧಿ ಆರೋಗ್ಯ

ವಿಶ್ವವಿದ್ಯಾಲಯದ ವತಿಯಿಂದ ಗೌರವ ಡಾಕ್ಟರೇಟ್, ಹಂಪಿ ಕನ್ನಡ ವಿಶ್ವವಿದ್ಯಾಲಯದ ವತಿಯಿಂದ ನಾಡೋಜ ಪ್ರಶಸ್ತಿ ಪುರಸ್ಕಾರಗಳು ಸೇರಿದಂತೆ ಅನೇಕ ಪ್ರತಿಷ್ಠಿತ ಗೌರವ ಪುರಸ್ಕಾರಗಳು ಸಮರ್ಪಣೆಯಾಗಿದ್ದು, ಇತ್ತೀಚೆಗೆ ಪೂಜ್ಯ ಖಾವಂದರ ಸಮಾಜಮುಖಿ ಸೇವೆಯ ಗೌರವಾರ್ಥ ಕೇಂದ್ರದ ನರೇಂದ್ರ ಮೋದಿ ಸರ್ಕಾರವು ಶ್ರೀಯವರನ್ನು ರಾಜ್ಯ ಸಭಾ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡುವ ಮೂಲಕ ಪೂಜ್ಯರ ಸೇವೆಯನ್ನು ದೇಶದಾದ್ಯಂತ ವಿಸ್ತರಿಸಲು ಮುನ್ನುಡಿಯನ್ನು ಬರೆದಿದೆ.

ನಿರಂತರವಾಗಿ ದಣಿವರಿಯದೆ ಸದಾ ಹಸನ್ಮುಖಿಯಾಗಿ ಲೋಕ ಕಲ್ಯಾಣಕ್ಕೆ ದುಡಿಮೆಮಾಡುವ ಶ್ರೀಯುತರು ಉತ್ತಮ ವಾಗ್ಮಿಗಳು ಜೊತೆಗೆ ಬರಹಗಾರರೂ ಸಹ ಆಗಿದ್ದಾರೆ.

ತಮ್ಮ ಸೋಮವಾರ ಸುವಿಚಾರ ಬರಹಗಳ ಮೂಲಕ ಅಕ್ಷರ ಜ್ಯೋತಿಯನ್ನು ಬೆಳಗಿದ ಶ್ರೀಯವರ ಚಿಂತನೆಗಳ ಓದುಗನಾದ ನನಗೆ, ಪೂಜ್ಯರ ಜನ್ಮದಿನದ ಪ್ರಯುಕ್ತ ಅವರಿಗೆ ಸಮಸ್ತ ಕರ್ನಾಟಕದ ಜನತೆಯ ಪರವಾಗಿ ಉಡುಗೊರೆಯಾಗಿ ಸಮರ್ಪಿಸಲು ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ ಎಂಬ 101 ಜೀವನ ಸಂದೇಶಗಳ ಕಾವ್ಯಾಂಜಲಿಯನ್ನು ರಚನೆ ಮಾಡಲು ಸ್ಫೂರ್ತಿ ನೀಡಿತು. ಭಕ್ತಿ ಭಾವನೆಗಳ, ಸಂಸ್ಕೃತಿ ಪರಂಪರೆಯ ಸಾಕ್ಷಿ ಪ್ರಜ್ಞೆಯಾದ ಡಾ.ಡಿ.ವೀರೇಂದ್ರ ಹೆಗ್ಗಡೆಯವ ಜನ್ಮದಿನದ ಪ್ರಯುಕ್ತ ಬರೆದ ಈ ಸಾಲುಗಳು ತನಗೆ ತಾನೇ ಪರಿಪೂರ್ಣತೆಯನ್ನು ಹೊಂದಿ ಪರಮ ಪೂಜ್ಯರಿಗೆ ಕನ್ನಡ ಭಾಷೆಯ ಅಕ್ಷರಾಭಿಷೇಕವಾಗಿದೆ ಎಂದರೆ ಅತಿಶಯವೇನಿಲ್ಲ.

ಈ ಸುಂದರ ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಣ ಮಾಡಲು ಸಹಕರಿಸಿದ ಎಲ್ಲಾ ಬಂಧು ಮಿತ್ರರಿಗೆ, ಹಿತೈಷಿಗಳಿಗೆ ಮತ್ತು ಕೃತಿಯನ್ನು ಸರ್ವಾಂಗ ಸುಂದರವಾಗಿ ಮುದ್ರಣ ಮಾಡಿಕೊಟ್ಟ ಐ.ಐ.ಪಿ. ಪಬ್ಲಿಷರ್ಸ್‌ನ ನಿರ್ದೇಶಕರಾದ ಶ್ರೀಯುತ ನಂಜೇಶ್ ಬಿ.ಆರ್., ವ್ಯವಸ್ಥಾಪಕರಾದ ಶ್ರೀ ಜಗದೀಶ್, ನವ್ಯಪಟೇಲ್, ಚಿತ್ರ, ಅಕ್ಷತಾ, ಮತ್ತು ಸೆಲ್ಫೀ ಪೇಜ್ ಡೆವಲಪರ್ಸ್‌ನ ಎಲ್ಲಾ ಸಿಬ್ಬಂದಿ ವರ್ಗದವರಿಗೆ ನಾನು ಸದಾ ಆಭಾರಿಯಾಗಿದ್ದೇನೆ,. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

ವಂದನೆಗಳೊಂದಿಗೆ.
ಎಸ್.ವಿಶ್ವನಾಥ್ (ವಿಶ್ವಕವಿ)
ಹೊಳೆನರಸೀಪುರ

ದಿನಾಂಕ 25–10–2019 ರಂದು, ಹಾಸನದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯದ ಆಸ್ಪತ್ರೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ "ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ" 101 ಜೀವನ ಸಂದೇಶಗಳ ಕೃತಿಯ ಪೋಟೋ ಆಲ್ಬಂನ್ನು, ಕರ್ನಾಟಕ ರತ್ನ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದ ಸ್ವಾಮೀಜಿ, ಮತ್ತು ಸಮಾಜ ಸೇವಕರಾದ ಶ್ರೀ ಹೊನವಳ್ಳಿ ಸತೀಶ್, ಎಸ್.ಡಿ.ಎಂ.ಸಿ. ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ .ಪ್ರಸನ್ನ. ಎನ್. ರಾವ್, ಬಾ.ರಾ,ಸು, ಹೆಚ್.ಸಿ.ಎನ್. ವಾಹಿನಿ ಮಾಲೀಕರಾದ ಚಂದ್ರು ಕೆ. ಎಸ್., ಮುರಳೀಧರ ಗುಪ್ತ ಮತ್ತು ಇನ್ನಿತರರು ಉಪಸ್ಥಿತರಿದ್ದರು.









# "ವಿಶ್ವಕವಿಗೆ ರಮಾಮಣಿಯ ಶುಭ ಹಾರೈಕೆ"

[ವಿ]ದ್ಯೆ ವಿನಯ ವಿವೇಕ ಮಿಳಿತಗೊಂಡಿಹುದು, ಶಾ
[ಶ್ವ]ತವಾಗಿ ಮನದಾಳದಲ್ಲಿ ಉಳಿದಂತೆ ರಚಿಸಿರುವೆ
[ಕ]ವಿತೆಯಲ್ಲಿ ಕನ್ನಡ ಕಸ್ತೂರಿ ಪರಿಮಳಿಸಿಹುದು
[ವಿ]ಶ್ವಕವಿ ಅನ್ವರ್ಥ ನಿನಗೆ ಈ ಕಾವ್ಯನಾಮ.

[ರ]ಚನೆಯಲಿ ಔಚಿತ್ಯ ಪದ ಬಳಕೆ
[ಮಾ]ತಿನಲಿ ಸವಿ ಜೇನಹನಿ ಬೆರಕೆ
[ಮ]ಲ್ಲಿಗೆಯ ಕೋಮಲತೆ ಲಯಕೆ, ಅ
[ಣಿ] ಮುತ್ತ ಹೆಣೆದಿರುವ ಕವನ ಮಾಲಿಕೆ.
[ಯ]ಶದ ಹಾದಿಯಲಿ ನೀನು

[ಶು]ಭದಭಯ ಪಡೆಯುತಲಿ
[ಭ]ರತನಾಳಿದೀ ಧರೆಯಲ್ಲಿ
[ಹಾ]ಡಿ ಹೊಗಳುವವನಾಗು
[ರೈ]ತನಂದಂದಿ ಕಾವ್ಯ ಕೃಷಿಗೈದು
[ಕೆ]ಚ್ಚಿನ ಮೆಚ್ಚಿನ ವರಕವಿಯಾಗು ನೀನು.

ಆಶೀರ್ವಾದಪೂರ್ವಕವಾಗಿ..



ಕೆ.ಎಸ್.ರಮಾಮಣಿ. ಎಂ.ಎ.ಬಿ.ಇಡಿ.
ನಿವೃತ್ತ ಶಿಕ್ಷಕಿ, ಕೋಟೆ,
ರಾಮಬ್ರಹ್ಮಾನಂದ ಪ್ರವಚನ
ಮಂದಿರದ ಹತ್ತಿರ
ಹೊಳೆನರಸೀಪುರ– 573 211

# ಪ್ರಕಾಶಕರ ನುಡಿ



**ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ** ಎಂಬ ಶೀರ್ಷಿಕೆಯಲ್ಲಿ ದೈವ ಸ್ವರೂಪರಾದ ಡಾ|| ಡಿ. ವೀರೇಂದ್ರ ಹೆಗ್ಗಡೆಯವರನ್ನು ಗುರುವಾಗಿ ಭಾವಿಸಿ ಎಸ್. ವಿಶ್ವನಾಥ್‌ರವರು ತಮ್ಮ ಜೀವನದ ಅನುಭವವನ್ನು ಹಿತ ಮಿತ ಶಬ್ದಗಳ ಮೂಲಕ ಬದುಕಿಗೆ ದಾರಿ ತೋರುವ ಹಾಗೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ವಿಚಾರಗಳನ್ನ ಬಹಳ ಸರಳವಾಗಿ ಈ ಪುಸ್ತಕದ ಮೂಲಕ ಜನರಿಗೆ ತಿಳಿಸಿದ್ದಾರೆ. ಇಂತಹ ವಿಶೇಷವಾದ ಪುಸ್ತಕವನ್ನು ನಮ್ಮ ಪುಸ್ತಕ ಮುದ್ರಣಾಲಯದ ಮೂಲಕ ಮುದ್ರಿಸಿ ಜನಕ್ಕೆ ತಲುಪಿಸುತ್ತಿರುವುದು ನಮಗೆ ಹೆಮ್ಮೆಯಾಗಿದೆ.

**ನಂಜೇಶ್ ಬೆಣ್ಣೂರು**
ನಿರ್ದೇಶಕರು
ಇಟರೇಟಿವ್ ಇಂಟರ್ನ್ಯಾಷನಲ್ ಪಬ್ಲಿಷರ್ (ಐ ಐ ಪಿ)
ಸೆಲ್ಫಿಪೇಜ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್
ಚಿಕ್ಕಮಗಳೂರು

ಡಾ॥ ಡಿ. ವೀರೇಂದ್ರ ಹೆಗ್ಗಡೆಯವರ
75ನೇ ವರ್ಷದ ಜನ್ಮ ದಿನದ
ಅಮೃತ ಮಹೋತ್ಸವದ ಸಂಭ್ರಮ



# ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ

# ಆತ್ಮೀಯ ಶಿಷ್ಯಮಿತ್ರನಿಗೆ,



ಸಾಹಿತ್ಯ, ಸಮಾಜಸೇವೆ ಮತ್ತು ಪತ್ರಿಕೋದ್ಯಮದ ತ್ರಿವೇಣಿ ಸಂಗಮವಾದ ಎಸ್.ವಿಶ್ವನಾಥ್, [ವಿಶ್ವಕವಿ]. ಹೊಳೆನರಸೀಪುರದ ಸೀತಾವಿಲಾಸ ರಸ್ತೆಯ ನಿವಾಸಿ, ವೃತ್ತಿಯಲ್ಲಿ ಟೈಲರಿಂಗ್ ಮಾಡುವುದರ ಜೊತೆಗೆ, ಪ್ರವೃತ್ತಿಯಲ್ಲಿ ಹಾರ್ಮೋನಿಯಮ್ ಕಲಾವಿದರಾದ ಆರ್ಯವೈಶ್ಯ ಜನಾಂಗದ ದಿ.ಲೇ.ಸಿ.ಸತ್ಯನಾರಾಯಣ ಶೆಟ್ಟಿ ಮತ್ತು ದಿ.ಎಸ್.ಪಂಚರತ್ನಮ್ಮ ಅವರ ಪುತ್ರರಾಗಿದ್ದಾರೆ.

ಪದವೀಧರರಾದ ಇವರು ಬಾಲ್ಯದಿಂದಲೇ ಸಾಹಿತ್ಯಾಸಕ್ತಿಯನ್ನು ರೂಢಿಸಿಕೊಂಡು, ಸತತವಾಗಿ ೨೫ ವರ್ಷಗಳಿಂದ ಸಾಹಿತ್ಯ ಕೃಷಿ ನಡೆಸುತ್ತಿದ್ದಾರೆ, ಕನ್ನಡ ಸಾಹಿತ್ಯ ಪರಿಷತ್ತು, ಚುಟುಕು ಸಾಹಿತ್ಯ ಪರಿಷತ್ತು, ಜಾನಪದ ಸಾಹಿತ್ಯ ಪರಿಷತ್ತು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ,ವಾಸವಿ ಕ್ಲಬ್, ಬರಹಗಾರ ಸಂಘ,ಪತ್ರಕರ್ತರ ಸಂಘ ಇನ್ನಿತರ ಸಂಘ ಸಂಸ್ಥೆಗಳ ಒಡನಾಟ ಬೆಳೆಸಿಕೊಂಡು, "ವಿಶ್ವಕವಿ" ಎನ್ನುವ ಕಾವ್ಯ ನಾಮದಿಂದ ಸಾಹಿತ್ಯ ರಚನೆ ಮಾಡುತ್ತಿರುವ ಇವರು, ಫೇಸ್‌ಬುಕ್ ನಲ್ಲಿ "ವಿಶ್ವಕವಿ ಹೊಳೆನರಸೀಪುರ" ಎಂಬ ಹೆಸರಿನ ಖಾತೆಯಲ್ಲಿ, ಇದುವರೆಗೂ ೫೦೦೦ಕ್ಕೂ ಹೆಚ್ಚಿನ ಸೃಜನಶೀಲ ವೈವಿಧ್ಯಮಯ ಬರಹಗಳನ್ನು ಬರೆದು ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯರಾಗಿದ್ದು ಜನ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಸತ್ಯಾನ್ವೇಷಣೆ ಮಾಡುವ ನೇರ,ದಿಟ್ಟ ನಿರಂತರವಾಗಿರುವ ಇವರ ಬರಹಗಳು, ಸುದ್ದಿ ಸಮಾಚಾರಗಳು ಅನೇಕ ಜಿಲ್ಲಾ ಮಟ್ಟದ ಮತ್ತು ಪ್ರಾದೇಶಿಕ ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು, ಹಲವಾರು ತಾಲ್ಲೂಕು,ಜಿಲ್ಲಾ,ರಾಜ್ಯ ಮಟ್ಟದ ಸಾಂಸ್ಕೃತಿಕ ಪ್ರಶಸ್ತಿಗೆ ಭಾಜನರಾದ ಇವರು. ತನ್ನ ಓದುಗರನ್ನು "ಓದುಗ ದೊರೆಗಳೇ" ಎಂದು ಸಂಬೋಧಿಸುವ ಮೂಲಕ ಓದುಗರಿಗೆ ಪ್ರೀತಿ ಪಾತ್ರರಾಗಿದ್ದಾರೆ. ಪೂಜ್ಯರ "ಸೋಮವಾರ ಸುವಿಚಾರ" ಸಾಲುಗಳಿಂದ ಸ್ಪೂರ್ತಿಗೊಂಡು, ಇದೀಗ ಕರ್ನಾಟಕ ರತ್ನ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರಹೆಗ್ಗಡೆಯವರ ೭೫ನೇ ವರ್ಷದ ಜನ್ಮದಿನದ ಅಮೃತಮಹೋತ್ಸವದ ಸುಸಂದರ್ಭದಲ್ಲಿ ಅವರಿಗೆ, ಧರ್ಮಸ್ಥಳದ ದೇವತಾ ಮನುಷ್ಯ ಎನ್ನುವ ಅಂಕಿತನಾಮದಲ್ಲಿ, "ಧರ್ಮಸ್ಥಳದ ದೇವತಾ ಮನುಷ್ಯನಿಗೆ ವಿಶ್ವ ನಮನ" ಎನ್ನುವ ೧೦೧ ಜೀವನ ಸಂದೇಶಗಳನ್ನು ಕೃತಿಯ ರೂಪದಲ್ಲಿ ಸಮಸ್ತ ಕನ್ನಡಿಗರೆಲ್ಲರ ಪರವಾಗಿ ಸಮರ್ಪಣೆ ಮಾಡುತ್ತಿರುವುದು ಔಚಿತ್ಯಪೂರ್ಣವಾಗಿದೆ,

ಪುರ ದೈವ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯು ಮತ್ತು ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯು ಇವರಿಗೆ ಸಾಹಿತ್ಯ,ಸಮಾಜ ಸೇವೆ ಮತ್ತು ಪತ್ರಿಕೋದ್ಯಮದಲ್ಲಿ ಮತ್ತಷ್ಟು ಸಾಧನೆ ಮಾಡಲು ಶಕ್ತಿಯನ್ನು, ಯುಕ್ತಿಯನ್ನು ಭಕ್ತಿಯನ್ನು ಕರುಣಿಸಲಿ ಎಂದು ಹಾರೈಸುತ್ತೇನೆ.

ಶಿಷ್ಯ ಮಿತ್ರನಿಗೆ
ಆಶೀರ್ವಾದಪೂರ್ವಕವಾಗಿ.



ಬಾ.ರಾ.ಸು.
ಸಾಮಾಜಿಕ ಸಂತ,ಮಾಜಿ ಪುರಸಭೆ ಸದಸ್ಯರು
ಹೊಳೆನರಸೀಪುರ.

E-ISBN: 978-93-5747-952-3

Selfypage Developers Pvt Ltd

MRP Rs. 120/-